ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಸ್ವಲ್ಪ ಮಂಟ್ಪಿಗೆ ದುಃಸ್ಥಿತಿಯಲ್ಲಿರುವುದು ಗಮನಕ್ಕೆ ಬಂದಿದೆ.

ಆ) ಸರಿ,

ಇ) ದಾಖಲೆಗಳನ್ನು ಕಾಯ್ದಿಡುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ರೆಕಾರ್ಡ್‌ಗಳ ಕೋಣೆಯನ್ನು ಶುದ್ಧೀಕರಿಸಿ ಅಗಿಂದ್ದಾಗೆ ಕ್ರಿಮಿನಾಶಕಗಳನ್ನು ಹೊಡೆದು ಜೋಪಾನ ಮಾಡಲಾಗುತ್ತಿದೆ ತೀರ ದುಃಸ್ಥಿತಿಯಲ್ಲಿರುವ ರೆಕಾರ್ಡ್‌ಗಳನ್ನು ಬೇರ್ಪಡಿಸಲಾಗುತ್ತಿದೆ ಅಗತ್ಯಬಿದ್ದಲ್ಲಿ ಕಾನೂನಿನ ಪ್ರಕಾರ ಅಂತಹ ದಾಖಲೆಗಳ ಹೊಸ ಪ್ರತಿಗಳನ್ನು ಮಾಡುವುದನ್ನು ಪರಿಶೀಲಿಸಲಾಗುವುದು.

ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡ ಬಗ್ಗೆ

೧೫೭೩. ಶ್ರೀ ಜಿ.ಎಸ್. ಪಾಗಲಕೋಟೆ (ಜಮಖಂಡಿ) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ಸರ್ಕಾರದವರು ಎಂದು ತನ್ನ ಅಧೀನಕ್ಕೆ ತೆಗೆದುಕೊಂಡರು?

ಆ) ೧೯೮೩-೮೩, ೮೩-೮೪, ೮೪-೮೫ನೇ ಸಾಲುಗಳಲ್ಲಿ ಈ ಬ್ಯಾಂಕು ಗಳಿಸಿದ ಲಾಭ ಅಥವಾ ನಷ್ಟದ ಮೊತ್ತವೆಷ್ಟು?

ಇ) ಸದರಿ ಬ್ಯಾಂಕನ್ನು ಸರ್ಕಾರದವರು ತನ್ನ ವಶಕ್ಕೆ ತೆಗೆದುಕೊಂಡ ನಂತರ ಬ್ಯಾಂಕಿನಲ್ಲಿ ಏನಾದರೂ ಸುಧಾರಣೆಗಳಾಗಿವೆಯೇ? ಹಾಗಿದ್ದಲ್ಲಿ ಯಾವುವು?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಸರ್ಕಾರವು ನೇಮಿಸಿದ ವಿಶೇಷ ಅಧಿಕಾರಿಯವರು ದಿನಾಂಕ ೨೪-೩-೮೪ ರಂದು ಬ್ಯಾಂಕಿನ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಆ) ೧೯೮೨-೮೩ ಹಾಗೂ ೧೯೮೩-೮೪ನೇ ಸಾಲುಗಳಲ್ಲಿ ಬ್ಯಾಂಕು ಕ್ರಮವಾಗಿ ರೂ. ೪೪.೦೨ ಲಕ್ಷ ಹಾಗೂ ರೂ. ೦೦.೫೬ ಲಕ್ಷಗಳ ಲಾಭವನ್ನು ಗಳಿಸಿರುತ್ತದೆ. ೧೯೮೪-೮೫ನೇ ಸಾಲಿನ ಆಡಿಟ್ ಆದ ಲಾಭ ಮತ್ತು ನಷ್ಟದ ಅಂಕಿಅಂಶಗಳು ಇನ್ನು ಸಿದ್ಧವಿರುವುದಿಲ್ಲ.

ಇ) ಆಗಿದೆ. ಸಾಲ ವಸೂಲಿ ಹಾಗೂ ಠೇವಣಿ ಸಂಗ್ರಹಗಳ ಕ್ಷೇತ್ರಗಳಲ್ಲಿ ಸುಧಾರಣೆ ಆಗಿದೆ.

ಬೆಳಗಾವಿ ಜಿಲ್ಲೆಯ ತಂಬಾಕು ಫೆಡರೇಷನ್

೬೨೮. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ತಂಬಾಕು ಸಹಕಾರಿ ಫೆಡರೇಷನ್ ಅಸ್ತಿತ್ವದಲ್ಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಫೆಡರೇಷನ್ ಕಾರ್ಯ ವ್ಯಾಪ್ತಿ ಯಾವುದು?

ಇ) ಮೇಲಿನ ಫೆಡರೇಷನ್ ತಂಬಾಕನ್ನು ನಿಪ್ಪಾಣಿ ವಿಭಾಗದಲ್ಲಿ ಶೇಖರಿಸಿ ಉಳಿದ ಭಾಗದಲ್ಲಿ ಬೆಳೆದ ತಂಬಾಕನ್ನು ಖರೀದಿ ಮಾಡದೆ ಇರುವುದರಿಂದ ರೈತರಿಗೆ ತೊಂದರೆಯಾಗಿಲ್ಲವೆ?

ಈ) ಫೆಡರೇಷನ್ ಮೂಲಕ ತಂಬಾಕು ಬೆಳೆಗಾರರಿಗೆ ನೀಡಲಾದ ಸಬ್ಸಿಡಿ ಮೊಬಲಗೆಷ್ಟು ಹಾಗೂ ಈ ಮೊಬಲಗನ್ನು ರೈತರಿಗೆ ನೀಡಲಾಗಿದೆಯೇ?

ಉ) ಫೆಡರೇಷನ್‌ಗೆ ಮಾಡಲಾದ ನಾಮಕರಣ ಸದಸ್ಯರ ಸಂಖ್ಯೆ ಎಷ್ಟು ಮತ್ತು ಸದರೀ ಸದಸ್ಯರನ್ನು ನಾಮಕರಣ ಮಾಡಲು ಇರುವ ಅಳತೆಗೋಲೇನು?